ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ
ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:619/2018

ಪಿರ್ಯಾದುದಾರರು : ವಿರುದ್ಧ ಆರೋಪಿತರು:

ಚನ್ನಗಿರಿ ಪೊಲೀಸ್ ಠಾಣೆ

ಎ 1. ಅಫ್ರೋಜ್ ಅಹಮ್ಮದ್ ಬಿನ್ ಮುನೀರ್ ಸಾಬ್,
ವಯಸ್ಸುಃ 35 ವರ್ಷ
ವಾಸಃ ವಡ್ನಾಳ್ ರಾಜಣ್ಣ ಬಡಾವಣೆ, ಚನ್ನಗಿರಿ ಟೌನ್,
ದಾವಣಗೆರೆ ಜಿಲ್ಲೆ.

ಎ 2. ಕುಮಾರ ಬಿನ್ ಕರೋಜಪ್ಪ,
ವಯಸ್ಸುಃ 34 ವರ್ಷ,

ಎ 3. ನಾಗೇಂದ್ರ ಬಿನ್ ನಿಂಗಪ್ಪ,
ವಯಸ್ಸುಃ 30 ವರ್ಷ,
ಆರೋಪಿ 2 ಮತ್ತು 3 ರವರ
ವಾಸಃ ಪಟೇಲ್ ನಗರ, ಚನ್ನಗಿರಿ ಟೌನ್, ದಾವಣಗೆರೆ ಜಿಲ್ಲೆ.

## ದೋಷಾರೋಪಣೆ

ನಾನು ಶ್ರೀ ಡಿ. ರಮೇಶ್, ಬಿ.ಎ.ಎಲ್. , ಎಲ್‌ಎಲ್.ಬಿ. ಹೆಚ್ಚುವರಿ ಪ್ರ.ದ.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ದಿನಾಂಕಃ 10-03-2017 ರಿಂದ ದಿಃ15-08-2017 ರ ನಡುವಿನ ಅವಧಿಯ ರಾತ್ರಿ ವೇಳೆಯಲ್ಲಿ ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಚನ್ನಗಿರಿ ತಾಲ್ಲೂಕು ಮಲ್ಲೇಶ್ವರ ಗ್ರಾಮದ ವಾಸಿ ಚಾಸಾ 1 ರವರ ಮನೆಯಲ್ಲಿ ಆರೋಪಿಗಳಾದ ನೀವುಗಳು ಚಾಸಾ 1 ರವರ ಮನೆಯ ಬೀಗ ಮುರಿದು ಒಳಗೆ ಅಕ್ರಮ ಪ್ರವೇಶ ಮಾಡಿ ಭಾದಂ .ಸಂಹಿತೆ ಕಲಂ 457 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

2.ಮೇಲೆ ತಿಳಿಸಿದ ಸ್ಥಳ ಸಮಯ ದಿನಾಂಕದಂದು ಆರೋಪಿಗಳಾದ ನೀವುಗಳು ಸದರಿ ಮನೆಯ ಗಾಡ್ರೇಜ್ ಬೀರುವಿನಲ್ಲಿದ್ದ 66,000/- ರೂ ಬೆಲೆ ಬಾಳುವ ಬಂಗಾರದ ಸರ ಮತ್ತು 29,000/- ರೂ ಬೆಲೆ ಬಾಳುವ ಒಂದು ಬಂಗಾರದ ನೆಕ್ಲೇಸ್ ನ್ನು ಕಳ್ಳತನ ಮಾಡಿರುವುದರಿಂದ, ಭಾ.ದಂ .ಸಂಹಿತೆ ಕಲಂ 380 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ.

ದಿನಾಂಕ:

(ಡಿ.ರಮೇಶ್)

ಹೆಚ್ಚುವರಿ ಪ್ರ.ದ.ನ್ಯಾ, ದಂಡಾಧಿಕಾರಿ,
ಚನ್ನಗಿರಿ.